ಹೇಳಿದ್ದೇನೆ. ಯಾವ್ಯಾವುದು ಅಪೂರ್ಣವಾಗಿದೆ ಅವುಗಳನ್ನು ಮೊದಲು ಪೂರ್ಣಗೊಳಿಸುವುದು. ಯಾವುದು ಅವಶ್ಯಕತೆ ಇದೆ, ಆ ಎಲ್ಲಾ ಕೆಲಸಗಳನ್ನು ನಮ್ಮ Chief Engineer ಗೆ ಆದೇಶವನ್ನು ಮಾಡಿದ್ದೇನೆ. ಎಲ್ಲದಕ್ಕೂ immediate ಆಗಿ estimate ಮಾಡಿ ತೆಗೆದುಕೊಂಡು ಬನ್ನಿ, immediately emergency ಯಾವ್ಯಾವುದು works ಬೇಕು ಎನ್ನುವುದನ್ನು ತೆಗೆದುಕೊಂಡು ಬನ್ನಿ, ಈ ವರ್ಷದಲ್ಲಿ ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ನಿರ್ಧಾರವನ್ನು ಮಾಡಿದ್ದೇವೆ. ತಾವು specific ಆಗಿ ಕೆಲವು ಮೂಲಭೂತ ಸೌಕರ್ಯಗಳ ಬಗ್ಗೆ ಪ್ರಶ್ನೆ ಎತ್ತಿದ್ದೀರಿ, ಅಲ್ಲಿ ಅಪ್ರೋಚ್ ಇಲ್ಲ, ಬ್ರಿಡ್ಜ ಇಲ್ಲ, ರಸ್ತೆ, ಸಮುದಾಯ ಭವನ ಬಗ್ಗೆ ಹೇಳಿದ್ದೀರಿ. ಎಲ್ಲದಕ್ಕಿಂಥ ಆಶ್ಚರ್ಯವೆಂದರೆ, ಗೋರೂರಿನಲ್ಲಿ ಡ್ಯಾಂ ಇದೆ, ಅಲ್ಲಿರುವ ಜನರಿಗೆ re-habilitation ಮಾಡಿಲ್ಲ. ಇಷ್ಟು ವರ್ಷ ಏಕೆ ಮಾಡಲಿಲ್ಲ, ಅದಕ್ಕೆ ಏನು ಕಾರಣ? ಆ ಜನ ಎಲ್ಲಾ ಬಂದಿದ್ದರು. ಅದನ್ನು ಕೂಡ ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಅಧ್ಯಕ್ಷರು: ರೇವಣ್ಣನವರೆ, ಅವರು ಉತ್ತರವನ್ನು ಕಂಪ್ಲೀಟ್ ಮಾಡಲಿ. ಹಾಗಾದರೆ ನಾನು ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಗೋರೂರು ಕೂಡ ಮಾನ್ಯ ಕುಮಾರಸ್ವಾಮಿಯವರು ಇದ್ದಾಗ 4(1)6(1)ಆಗಿರುತ್ತದೆ.

ಶ್ರೀ ಎಸ್.ಆರ್.ಬೊಮ್ಮಾಯಿ: ಆವರ ಹೇಳಿಕೆಯನ್ನು ಪಡೆದುಕೊಂಡು ಎಲ್ಲಾ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಭೂಮಿ ಕಳೆದುಕೊಂಡವರಿಗೆ ನೀಡಿರುವ ಪರಿಹಾರದ ಬಗ್ಗೆ.

35(1)77 Sir. Eshwar Bheemanna Khandre.

Bhalki Basavaraja Bommai. (Minister for Water Resources).

ಅ) ಬೀದರ ಜಿಲ್ಲೆಯಲ್ಲಿ ಯಾವ ಯಾವ ನೀರಾವರಿ ಯೋಜನೆಗಳಿಂದ ರೈತರು ಭೂಮಿ ಕಳೆದು ಕೊಂಡು ಸಂತ್ರಸ್ತರಾಗಿದ್ದಾರೆ; ಈ ಜನರಿಗೆ ಇಲ್ಲಿಯವರೆವಿಗೆ ಯಾವ ಬದಲಿ ವ್ಯವಸ್ಥೆಗಳನ್ನು ಮಾಡಲಾಗಿದೆ: (ಯೋಜನೆಗಳ ವಿವರಗಳನ್ನು ಒದಗಿಸುವುದು);

ಆ) ಸಂತ್ರಸ್ತರಾದವರಲ್ಲಿ ಇಲ್ಲಿಯವರೆವಿಗೆ ಎಷ್ಟು ಜನರಿಗೆ ಎಷ್ಟು ಮೊತ್ತದ ಪರಿಹಾರವನ್ನು ನೀಡಲಾಗಿದೆ. ; (ಯೋಜನೆವಾರು ಅಂಕಿ ಅಂಶಗಳನ್ನು ಒದಗಿಸುವುದು).

ಇ) ನೀಡಿದಲ್ಲಿ, ಇನ್ನೂ ಎಷ್ಟು ಜನ ಸಂತ್ರಸ್ತರಿಗೆ ಎಷ್ಟು ಮೊತ್ತದ ಪರಿಹಾರವನ್ನು ಕೊಡಬೇಕಾಗಿದೆ: ಇಷ್ಟು ದಿನಗಳಿಂದ ಈ ಪ್ರಕರಣಗಳು ಬಾಕಿ ಇವೆ ಮತ್ತು ಈ

ಪ್ರಕರಣಗಳು ಹಲವಾರು ವರ್ಷಗಳಿಂದ ಬಾಕಿ ಇರಲು ಕಾರಣಗಳೇನು; (ಪ್ರತಿಯೊಂದು ಯೋಜನೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು.);

ಈ) ನೀರಾವರಿ ಯೋಜನೆಗಳ ಸಲುವಾಗಿ ಭೂಮಿ ಕಳೆದುಕೊಂಡು ಸಂತ್ರಸ್ತರಾಗಿರುವ ಜನರಿಗೆ ಶೀಘ್ರವಾಗಿ ಪರಿಹಾರವನ್ನು ನೀಡಲು ಸರ್ಕಾರ ಯಾವಕ್ರಮ ಕೈಗೊಂಡಿದೆ ?

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ಈ ಕಾಠಂಜಾ ನೀರಾವರಿ ಯೋಜನೆ ನನ್ನ ಕ್ಷೇತ್ರದಲ್ಲಿ ಬರುತ್ತದೆ. 1971 ರ ದಶಕದಲ್ಲಿ ಪ್ರಾರಂಭವಾಗಿ 38 ವರ್ಷಗಳಾದರೂ ಈಗ ಪೂರ್ತಿಯಾಗಲಿಕ್ಕೆ ಬರುತ್ತಿದೆ. ಇಲ್ಲಿ ಭೂಮಿಯನ್ನು ಕಳೆದುಕೊಂಡಂಥ ಸಂತ್ರಸ್ಥರಿಗೆ ಪುನರ್ ವಸತಿಕೇಂದ್ರಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಕೊಟ್ಟಿದ್ದೇವೆಂದು ಉತ್ತರದಲ್ಲಿ ಬಂದಿವೆ.

ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅವರಿಗೂ ಸಹ ಈ ಬಗ್ಗೆ ಮಾಹಿತಿ ಇದೆ. ಅವರು ಅನೇಕ ಸಲ ಬೀದರ್‌ಗೆ ಭೇಟಿ ಕೊಟ್ಟಾಗ ಇಲ್ಲಿನ ಜನರು ಶ್ರದ್ಧೆ ಇಟ್ಟು ಕೊಂಡು ಮಾಡಿದ್ದಾರೆ. ಅಲ್ಲಿ 8 ಹಳ್ಳಿಗಳು ಏನು ಮುಳುಗಿಹೋಗಿದ್ದವು. ಅಲ್ಲಿ ಅವರಿಗೆ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಸಿಕ್ಕಿಲ್ಲ. ಈ 8 ಹಳ್ಳಿಗಳಲ್ಲಿ ಕನಿಷ್ಟವಾದಂತಹ ರಸ್ತೆಗಳಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ,ಶಾಲೆಯಾಗಲಿ,ಚರಂಡಿಗಳಾಗಲಿ ಅಲ್ಲಿನ ಪರಿಸ್ಥಿತಿ ಯಾವ ರೀತಿ ಇದೆ ಎಂದು ಹೇಳಿದರೆ ಒಂದು ಸ್ಲಮ್‌ನಲ್ಲಿ ಏನು ಜನರು ಇರುತ್ತಿದ್ದಾರೆ ಅಲ್ಲಿ ಕೆಳಮಟ್ಟದ ಪರಿಸ್ಥಿತಿಯಲ್ಲಿ ಜನರು ಇದ್ದಾರೆ. 2000ನೇ ಇಸವಿಯಲ್ಲಿ ಜಿಲ್ಲಾಪಂಚಾಯಿತಿಗೆ ಹಸ್ತಾಂತರ ಮಾಡಿದ್ದೇವೆಂದು ಹೇಳಿದ್ದರೂ ಬಹಳಷ್ಟು ಜಿಲ್ಲಾ ಪಂಚಾಯಿತಿಗೆ ಹಣವನ್ನು ಒದಗಿಸಿದ್ದರೂ ಅಲ್ಲಿ ವ್ಯಾಪಕವಾದಂತಹ ದೂರುಗಳು ಬಂದು ಯಾವುದೇ ಕೆಲಸಗಳು ಆಗಿರುವುದಿಲ್ಲವೆಂದು ಅವರುಗಳು ಮನವಿಯನ್ನು ಸಲ್ಲಿಸಿದ ಮೇಲೆ ಪುನರ್ ಪರಿಶೀಲನೆ ಮಾಡಿ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು, ಪ್ರಸ್ತಾವನೆಯೂ ಸರ್ಕಾರದ ಮುಂದೆ ಇದೆ. ಸರ್ಕಾರ ಈ 8 ಹಳ್ಳಿಗಳಿಗೆ ಪುನರ್ ವಸತಿಯ ಕಾಮಾಗಾರಿಯನ್ನು ಮತ್ತೊಮ್ಮೆ ಮಾಡಬೇಕೆಂಬ ಹಿನ್ನೆಲೆಯಲ್ಲಿ ಅದನ್ನು ಮಾಡುತ್ತಾರೆಯೇ ಅಥವಾ ಇಲ್ಲವೇ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಇದರ ಜೊತೆಯಲ್ಲಿ ಇಲ್ಲಿ ಭೂಮಿಯನ್ನು ಕಳೆದುಕೊಂಡಂತಹ ರೈತರಿಗೆ ಭೂಸ್ವಾಧೀನ ಮಾಡಿಕೊಂಡಂತಹವರಿಗೆ ಅನೇಕ ಜನರು ಸುಮಾರು ವರ್ಷಗಳಿಂದ 4(1) ಮತ್ತು 6(1) ನೋಟಿಫಿಕೇಷನ್ ಆಗಿದೆ, ಆವಾರ್ಡ್ ಆಗಿದೆ, ರೈತರೆಲ್ಲರೂ ದಿನನಿತ್ಯ ಕಛೇರಿಗಳಿಗೆ ಓಡಾಡುತ್ತಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಮೊದಲೇ ಕಾರಂಜಾ ಯೋಜನೆಯಲ್ಲಿ ಸಂತ್ರಸ್ಥರಿಗೆ ಹಣ ಸಿಕ್ಕಿದೆ ಬಹಳ ಕಡಿಮೆ. ಮೂರು ಸಾವಿರ ರೂಪಾಯಿಗಳಿಂದ ಹತ್ತು, ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ ಭೂಮಿಯನ್ನು ಕಳೆದು ಕೊಂಡಂತಹ ರೈತರಿಗೆ ಸಿಕ್ಕಿದೆ. ಅಂತಹದ್ದರಲ್ಲಿ ಆವಾರ್ಡ್ ಆದರೂ

ಸುಮಾರು ವರ್ಷಗಳಿಂದ ಅವರೆಲ್ಲರಿಗೂ ಪರಿಹಾರವು ಸಿಗದೆ ಜಿಲ್ಲಾಧಿಕಾರಿ ಕಛೇರಿಗಳಿಗೆ ಓಡಾಡಿ ಚಪ್ಪಲಿಯನ್ನು ಹರಿದುಕೊಳ್ಳುತ್ತಿದ್ದಾರೆ. ಈಗ ನೀರಾವರಿ ಇಲಾಖೆಯಿಂದ ಸ್ವಲ್ಪ ಮಟ್ಟಿಗೆ ದುಡ್ಡು ಬಿಡುಗಡೆಯಾದರೂ ಕಂದಾಯ ಇಲಾಖೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಆ ಹಣವು ಬಿಡುಗಡೆಯಾಗುತ್ತಿಲ್ಲ. ಏಕೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಬೀದರ್ ಜಿಲ್ಲೆಯೂ ಅತ್ಯಂತ ಹಿಂದುಳಿದಿದೆ ಎಂದು ಹೇಳಿದರು. ಒಬ್ಬ Special Land Acquisition ಅಧಿಕಾರಿ 2001 ನೇ ಇಸವಿಯಿಂದ ಇವತ್ತಿನ ವರೆಗೆ ಅಲ್ಲಿ ಇಲ್ಲಿ. 8 ವರ್ಷಗಳಿಂದ ಅಲ್ಲಿ ಒಬ್ಬ ಅಧಿಕಾರಿ ಇಲ್ಲವೆಂದು ಹೇಳಿದರೆ ಯಾವ ರೀತಿಯಾಗಿ ರೈತರಿಗೆ ನ್ಯಾಯವನ್ನು ಒದಗಿಸುವುದಕ್ಕೆ ಸಾಧ್ಯವಿದೆ. ಇಲ್ಲಿ ನನಗೆ ಉತ್ತರವನ್ನು ಕೊಟ್ಟಿದರಲ್ಲಿ ಎಲ್ಲಾ ರೈತರಿಗೆ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಬಹಳಷ್ಟು ಜನ ರೈತರಿಗೆ ನೂರಾರು ಜನರಿಗೆ ಇನ್ನು ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರ ಸಿಕ್ಕಿಲ್ಲ. ಅವರು ಭೂಮಿಯನ್ನು ಕಳೆದುಕೊಂಡಿದ್ದಾರೆ. ಅವರುಗಳಿಗೆ ಪರಿಹಾರವು ಸಿಕ್ಕಿರುವುದಿಲ್ಲ. 2006 ನೇ ಇಸವಿಯಲ್ಲಿ ಕಾರಂಜಾ ಯೋಜನೆಯಲ್ಲಿ ಏನು ಸಂತ್ರಸ್ಥರಿದ್ದಾರೆ, ಅವರುಗಳಿಗೆ ಸಾಕಷ್ಟು ಅನ್ಯಾಯವಾಗಿದೆ ಎಂದು ಸರ್ಕಾರ ಒಂದು ಹೈಪವರ್ ಕಮಿಟಿಯನ್ನು ಮಾಡಿತ್ತು. ಅಲ್ಲಿ ಏನು ವರದಿ ಬಂದಿದೆ, ಅದನ್ನು ಸರ್ಕಾರವು ಅನುಷ್ಟಾನಕ್ಕೆ ತರುತ್ತಿದೆಯೇ ಅಥವಾ ಅದರ ಬಗ್ಗೆ ಏನು ವಿಚಾರವನ್ನು ಮಾಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಏನು 8 ಹಳ್ಳಿಗಳು ಮುಳುಗಡೆಯಾಗಿದೆ. ಅವುಗಳಿಗೆ ಪುನರ್‌ವಸತಿ ಕೇಂದ್ರವನ್ನು ನಿರ್ಮಾಣ ಮಾಡಿ 2000ನೇ ಇಸವಿಯಲ್ಲಿಯೇ ಜಿಲ್ಲಾಪಂಚಾಯಿತಿಗೆ handover ಮಾಡಿದ್ದೇವೆ. ಮುಂದಿನ ಅಭಿವೃದ್ಧಿಯನ್ನು ಮಾಡುವಂತಹದ್ದು ಜಿಲ್ಲಾಪಂಚಾಯಿತಿಯವರ ಕೆಲಸವಾಗಿದೆ. ಆದು ಆದರೂ ಕೂಡ ಇಲ್ಲಿ ಸರಿಯಾಗಿ ಆಗಿಲ್ಲವೆಂಬ ದೃಷ್ಟಿಯಿಂದ ಒಂದು ಹೈಪರ್ ಕಮಿಟಿಯಲ್ಲಿ ನಿರ್ಧಾರವಾದಂತೆ ಸುಮಾರು 3 ಕೋಟಿ ರೂಪಾಯಿಗಳನ್ನು ಮತ್ತೆ extra ಬಿಡುಗಡೆ ಮಾಡಿ ಆ ಕಾಮಗಾರಿ ಕೆಲಸವು ಆಗಿದೆ. ಆದು ಅದಮೇಲೆ ಇನ್ನು ಕೆಲಸಗಳು ಆಗಿಲ್ಲವೆಂದು ಒಂದು ದೂರು ಬಂದ ಮೇಲೆ ನಾನು ಹೈಪರ್ ಕಮಿಟಿಯ ಒಂದು ಸಭೆಯನ್ನು ನಡೆಸಿ ಸುಮಾರು 3 ಕೋಟಿ 42 ಲಕ್ಷ ರೂಪಾಯಿಗಳ ಒಂದು ಪ್ರಸ್ಥಾವನೆ ಆಗುತ್ತದೆ ಎಂಬ ಅಂದಾಜು ಅದಮೇಲೆ ಅದನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿ ಕೊಟ್ಟಿದ್ದೇವೆ. ಜಿಲ್ಲಾ ಪಂಚಾಯಿತಿಯಿಂದ ಪ್ರಸ್ತಾವನೆಯು ಬಂದ ಮೇಲೆ ಈಗಾಗಲೆ 15 ಕೋಟಿ ರೂಪಾಯಿಗಳ ಈ ವರ್ಷದ ಪ್ರೋಗ್ರಾಮ್ ಇದೆ; ಅದನ್ನು ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಅದು ಬಂದ ತಕ್ಷಣವೇ ಇದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ. ಇನ್ನು ಎರಡನೆಯದಾಗಿ ಹೇಳುವುದಾದರೆ ಸುಮಾರು 147 ಕೇಸ್‌ಗಳಲ್ಲಿ ಇಲ್ಲಿ ಏನಾಗಿದೆ ಎಂದರೆ ಈ Land Acquistion ನಿರಂತರವಾಗಿ ನಡೆಯುವಂತಹ ಪ್ರಕ್ರಿಯೆಯಾಗಿದೆ. 1960 ರ

ದಶಕದಲ್ಲಿ ಯೋಜನೆಗಳು ಆಗಿತ್ತು ಇವತ್ತು ಕೂಡ land acquisition ಪ್ರಕರಣಗಳು ಇದೆ. ಅದರಲ್ಲಿ ಬಹಳಷ್ಟು ಕಾನೂನು ಮತ್ತು ಇತರ ತಾಂತ್ರಿಕ ತೊಂದರೆಗಳು ಕೂಡ ಇವೆ. ಇವತ್ತು ಅದನ್ನು ನಿವಾರಣೆ ಮಾಡುವುದಕ್ಕೆ ಹಲವಾರು ಕ್ರಮಗಳನ್ನು ನಮ್ಮ ರಾಜ್ಯ ಸರ್ಕಾರವು ತೆಗೆದುಕೊಂಡಿದೆ ಅದನ್ನು ಮತ್ತೊಂದು ಸಾರಿ ಹೇಳುತ್ತೇನೆ. 147 specific ಆದ ಕೇಸ್‌ಗಳು ಏನಿವೆ ಅವುಗಳನ್ನು ಈಗಾಗಲೇ law department ಕಳುಹಿಸಿಕೊಟ್ಟಿದ್ದೇವೆ. ಇದು ಅಪೀಲ್‌ಗೆ ಫಿಟ್ ಅಥವಾ ಇಲ್ಲವೆ ಎಂದು ಕೇಳಿದ್ದೇವೆ. ಅಲ್ಲಿಂದ ಉತ್ತರ ಬಂದ ತಕ್ಷಣವೇ ಅದಕ್ಕಾಗಿ 8 ಕೋಟಿ ರೂಪಾಯಿಗಳನ್ನು ತೆಗೆದು ಇರಿಸಿದ್ದೇವೆ. ಆ ಹಣವನ್ನು ಕೂಡಲೇ ಬಿಡುಗಡೆ ಮಾಡುವುದಕ್ಕೆ ನಾವು ಮಾಡುತ್ತೇವೆ. ಅದೇ ರೀತಿಯಾಗಿ ಚುಳಕಿನಾಲಾದಲ್ಲಿ 127 ಕೇಸ್‌ಗಳು ಇವೆ, ಅದು ಕೂಡ law department ನಲ್ಲಿದೆ ಅಲ್ಲಿಂದ ಬಂದ ತಕ್ಷಣವೇ ಅದಕ್ಕಾಗಿ ದುಡ್ಡನ್ನು ಒದಗಿಸಿದ್ದೇವೆ. ಅಲ್ಲಿಂದ ಬಂದ ತಕ್ಷಣ ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಹೈಪರ್ ಕಮಿಟಿಯಲ್ಲಿ ಇನ್ನಿತರ ಸೌಲಭ್ಯಗಳು ಮತ್ತೇ World Bank Project ನಲ್ಲಿ ಯಾವರೀತಿಯಾಗಿ ಪರಿಹಾರವನ್ನು ಕೊಟ್ಟಿದ್ದೀರಿ, ಅದೇ ರೀತಿಯಾಗಿ ಪರಿಹಾರವನ್ನು ಕೊಡಬೇಕೆಂದು ಏನು ಪ್ರಸ್ತಾವನೆಯೂ ಬಂದಿದೆ, ಅದು ಅನುಷ್ಟಾನಕ್ಕೆ ಬರುತ್ತಿದೆಯೇ ಹೇಗೆ, ಈಗ ಯಾರ್ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೆ, ಈಗಾಗಲೇ ಹಣವು ಬಂದಿದೆ, ಆದರೂ ಹಣವು ಬಿಡುಗಡೆಯಾಗುತ್ತಿಲ್ಲ. ರೈತರೆಲ್ಲರೂ ಓಡಾಡುತ್ತಿದ್ದಾರೆ ಅಂತಹವರಿಗೆ ಏಷ್ಟು ನಿಗದಿತವಾದಂತಹ ಸಮಯದಲ್ಲಿ ಯಾವುದು ಕೋರ್ಟು ಕೇಸ್‌ಗಳಾಗಲಿ, ಏನು ಇಲ್ಲ. ಆದರೆ ಆಡಳಿತಾತ್ಮಕ ನಿರ್ಲಕ್ಷ್ಯತನದಿಂದ ಏನು ಹಣವು ಹಾಗೆಯೇ ಉಳಿದುಕೊಂಡಿದೆ, ಅದಕ್ಕೆ ಒಂದು ಕಾಲಾವಕಾಶವನ್ನು ಕೊಟ್ಟು ಒಂದು ಕಾಲಾಮಿತಿಯಲ್ಲಿ ಅದಕ್ಕೆ ಹಣವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆ ಎಷ್ಟು ದಿವಸದಲ್ಲಿ ಮಾಡುತ್ತೀರಿ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ ಕಲಮು 28 (ಎ) ಕೆಳಗಡೆ ಕೆಲವರು ಕೋರ್ಟಿಗೆ ಹೋಗಿ ಏನು ಅದೇಶವನ್ನು ತಂದಿದ್ದಾರೆ. ಅದಕ್ಕೆ ಕಾನೂನಾತ್ಮಕವಾದಂತಹ ತೊಂದರೆ ಇಲ್ಲ. ಅದಕ್ಕೆ ಹಣವನ್ನು ಕೂಡಲೇ ಬಿಡುಗಡೆ ಮಾಡುತ್ತೇವೆ. ಇನ್ನು ಕೆಲವರು ಕಲಮು 28 (ಎ) ರಲ್ಲಿ ಹೋಗದೆಯೇ ಕೇಳುತ್ತಿದ್ದಾರೆ ಅಂತಹವರಿಗೆ ಕಾನೂನಿನಲ್ಲಿ ಅವಕಾಶವಿಲ್ಲ.